# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2792

ಮಾನ್ಯ ಸದಸ್ಯರ ಹೆಸರು : ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು)

ಉತ್ತರಿಸುವ ದಿನಾಂಕ : 28/03/2022

ಉತ್ತರಿಸುವ ಸಚಿವರು : ಪ್ರವಾಸೋದ್ಯಮ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು.

*****

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಪ್ರವಾಸೋದ್ಯಮ ಇಲಾಖೆಯಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳನ್ನು ಕೈಗೊಳ್ಳಲಾಗಿದೆಯೇ ; ಹಾಗಿದ್ದಲ್ಲಿ ಅವು ಯಾವುವು : (ಸಂಪೂರ್ಣ ವಿವರವನ್ನು ಒದಗಿಸುವುದು) | ಪ್ರವಾಸೋದ್ಯಮ ಇಲಾಖೆಯಿಂದ ಕೇಂದ್ರ ಪುರಸ್ಕೃತ ಯೋಜನೆಗಳು ಕೆಳಕಂಡಂತ್ತಿವೆ.<br>1. ಸ್ವದೇಶ್ ದರ್ಶನ್<br>2. ಪ್ರಸಾದ್<br>3. ಪರ್ವತಮಾಲಾ<br>"ಸ್ವದೇಶ್ ದರ್ಶನ್" ಮತ್ತು "ಪ್ರಸಾದ್" ಯೋಜನೆಗಳಡಿ ಈ ಕೆಳಕಂಡ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಲು ಪ್ರಸ್ತಾಪಿಸಲಾಗಿರುತ್ತದೆ.<br>**(Rs. In Cr)**<br>**Sl No. / Project name / Estimated cost**<br>**Swadesh Darshan Scheme**<br>1. Shanthi sagar (Heritage) — 55.27<br>2. Coastal Circuit — 19.13<br>3. Decan Heritage Circuit — 145.71<br>4. Eco Tourism Circuit — 92.60<br>5. Jain Circuit — 70.43<br>**Prashad Scheme**<br>1. Chamundeshwari Temple, — 109.74<br>2022-23ನೇ ಸಾಲಿನ ಆಯವ್ಯಯದಲ್ಲಿ ಕೇಂದ್ರ ಸರ್ಕಾರವು 'ಪರ್ವತಮಾಲಾ' ಯೋಜನೆಯನ್ನು ಘೋಷಿಸಿದ್ದು, ಸದರಿ ಯೋಜನೆಯಡಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಪರಿಶೀಲಿಸಲಾಗುತ್ತಿದೆ.. |
| ಆ) | ಈ ಯೋಜನೆಗಳ ಉದ್ದೇಶವೇನು; ಈ ಯೋಜನೆಗಳಡಿಯಲ್ಲಿ ಕಳೆದ 7 ವರ್ಷಗಳಿಂದ ರಾಜ್ಯಕ್ಕೆ ಬಿಡುಗಡೆಯಾಗಿರುವ ಅನುದಾನ ಎಷ್ಟು: | ಸ್ವದೇಶ್ ದರ್ಶನ್, ಪ್ರಸಾದ್ ಮತ್ತು ಪರ್ವತಮಾಲಾ ಯೋಜನೆಗಳ ಉದ್ದೇಶವನ್ನು ಅನುಬಂಧ-1 ರಲ್ಲಿ ಒದಗಿಸಿದೆ.<br><br>ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯವು ಸ್ವದೇಶ್ ದರ್ಶನ್ ಯೋಜನೆಯಡಿಯಲ್ಲಿ ಕೋಸ್ಟಲ್ ಸರ್ಕ್ಯೂಟ್‌ನಲ್ಲಿ ಕರಾವಳಿ ವೃತ್ತ ಅಭಿವೃದ್ಧಿ ಪಡಿಸುವ ಸಂಬಂಧ ಉತ್ತರ ಕನ್ನಡ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಗಳ ಒಟ್ಟು 09 ಕಡಲತೀರಗಳನ್ನು ರೂ.91.11 ಕೋಟಿಗಳ ಮೊತ್ತದಲ್ಲಿ ಅಭಿವೃದ್ಧಿಪಡಿಸಲು ಮಂಜೂರಾತಿ ನೀಡಿ, ಮೊದಲ ಹಂತದಲ್ಲಿ ಕೋಸ್ಟಲ್ ಸರ್ಕ್ಯೂಟ್‌ಗೆ ರೂ.19,13,47,000 ಗಳನ್ನು ನೋಡಲ್ ಸಂಸ್ಥೆಯಾದ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ, ಬೆಂಗಳೂರುರವರಿಗೆ ಬಿಡುಗಡೆ ಮಾಡಲಾಗಿತ್ತು. ಕರಾವಳಿ ನಿಯಂತ್ರಣ ವಲಯದಲ್ಲಿ ವಿವಿಧ ಮೂಲಭೂತ ಸೌಕರ್ಯಗಳನ್ನು ನಿರ್ಮಿಸಲು ಅನುಮೋದನೆ ದೊರಕದ ಹಿನ್ನಲೆಯಲ್ಲಿ ದಿನಾಂಕ:08.07.2020 ರಂದು ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ ಸೂಚನೆಯಂತೆ ಕ್ರೋಡೀಕೃತ ಬಡ್ಡಿ ಸಹಿತ ರೂ.21.74/- ಕೋಟಿ ಅನುದಾನವನ್ನು ಹಿಂದಿರುಗಿಸಲಾಗಿದೆ. |

<table>
<tr>
<td>ಇ)</td>
<td>ರಾಜ್ಯದಲ್ಲಿ ಈ ಯೋಜನೆಗಳಡಿಯಲ್ಲಿ ಕೈಗೊಳ್ಳಲಾಗಿರುವ ಕಾಮಗಾರಿಗಳು ಯಾವುವು; (ಕಾಮಗಾರಿಗಳ ಹೆಸರು ಅಂದಾಜು ಮೊತ್ತ ಸೇರಿದಂತೆ ಸಂಪೂರ್ಣ ಮಾಹಿತಿಯನ್ನು ಒದಗಿಸುವುದು)</td>
<td>ಉದ್ಭವಿಸುವುದಿಲ್ಲ</td>
</tr>
<tr>
<td>ಈ)</td>
<td>ಈ ಯೋಜನೆಗಳಡಿಯಲ್ಲಿ ಎಷ್ಟು ಕಾಮಗಾರಿಗಳನ್ನು ಮಂಜೂರಾತಿಗಾಗಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಈವರೆಗೆ ಎಷ್ಟು ಪ್ರಸ್ತಾವನೆಗಳಿಗೆ ಮಂಜೂರಾತಿ ನೀಡಲಾಗಿದೆ, ಮಂಜೂರಾತಿ ನೀಡಬೇಕಾದ ಪ್ರಸ್ತಾವನೆಗಳು ಎಷ್ಟು; ಮಂಜೂರಾತಿ ನೀಡದಿದ್ದಲ್ಲಿ ಕಾರಣಗಳೇನು? (ಸಂಪೂರ್ಣ ವಿವರವನ್ನು ಒದಗಿಸುವುದು)</td>
<td>
ರಾಜ್ಯದ ಪ್ರವಾಸೋದ್ಯಮ ಇಲಾಖೆಯಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳಾದ "ಸ್ವದೇಶ್‌ದರ್ಶನ್" ಯೋಜನೆಯಡಿಯಲ್ಲಿ 05 ಪ್ರಸ್ತಾವನೆಗಳನ್ನು ಹಾಗೂ "ಪ್ರಸಾದ್" ಯೋಜನೆಯಡಿ ಒಂದು ಪ್ರಸ್ತಾವನೆಯನ್ನು ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯಕ್ಕೆ ಸಲ್ಲಿಸಲಾಗಿದ್ದು, ಸ್ವದೇಶ್‌ದರ್ಶನ್ ಯೋಜನೆಯಡಿಯಲ್ಲಿ ಸಲ್ಲಿಸಿರುವ ಪ್ರಸ್ತಾವನೆಗಳು ಅನುಮೋದನೆಯಾಗಿರುವುದಿಲ್ಲ. ಪ್ರಸಾದ್ ಯೋಜನೆಯಡಿ ಸಲ್ಲಿಸಲಾದ ಪರಿಕಲ್ಪನಾ ವರದಿ ಅನುಮೋದನೆಗೊಂಡಿದ್ದು, ಪ್ರಸಕ್ತ ವಿವರವಾದ ಯೋಜನಾ ವರದಿ ತಯಾರಿಸಲು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.
ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆಗಳ ವಿವರ ಈ ಕೆಳಕಂಡಂತಿವೆ.
(Rs. In Cr)
<table>
<tr><th>Sl No.</th><th>Project name</th><th>Estimated cost</th></tr>
<tr><td colspan="3">Swadesh Darshan Scheme</td></tr>
<tr><td>1.</td><td>Shanthi sagar (Heritage)</td><td>55.27</td></tr>
<tr><td>2.</td><td>Coastal Circuit</td><td>19.13</td></tr>
<tr><td>3.</td><td>Decan Heritage Circuit</td><td>145.71</td></tr>
<tr><td>4.</td><td>Eco Tourism Circuit</td><td>92.60</td></tr>
<tr><td>5.</td><td>Jain Circuit</td><td>70.43</td></tr>
<tr><td colspan="3">Prashad Scheme</td></tr>
<tr><td>1.</td><td>Chamundeshwari Temple,</td><td>109.74</td></tr>
</table>
ಸ್ವದೇಶ್ ದರ್ಶನ್ ಯೋಜನೆಯಡಿಯಲ್ಲಿ ಸಲ್ಲಿಸಲಾದ ಐದು ಪ್ರಸ್ತಾವನೆಗಳು ಕೇಂದ್ರ ಸರ್ಕಾರದಿಂದ ಅನುಮೋದನೆಗೊಂಡಿರುವುದಿಲ್ಲ. ಪ್ರಸಕ್ತ ಭಾರತ ಸರ್ಕಾರದ ಪ್ರವಾಸೋದ್ಯಮ ಮಂತ್ರಾಲಯವು ದಿನಾಂಕ:15.03.2021 ಹಾಗೂ 15.11.2021ರ ಪತ್ರಗಳಲ್ಲಿ ಈ ಕೆಳಕಂಡಂತೆ ಸ್ವದೇಶ ದರ್ಶನ್ ಬಗ್ಗೆ ಸೂಚನೆಗಳನ್ನು ನೀಡಲಾಗಿದೆ.
<ul>
<li>ಪ್ರಸಕ್ತ ಸ್ವದೇಶ ದರ್ಶನ್ ಯೋಜನೆಯಡಿಯಲ್ಲಿ ಪ್ರಸ್ತಾವನೆಗಳನ್ನು ಪುನರ್ ಪರಿಶೀಲಿಸುತ್ತಿದ್ದು, ಹೊಸ ಯೋಜನೆಗಳನ್ನು ಪಡೆಯಲಾಗುತ್ತಿಲ್ಲ.</li>
<li>ಮಾರ್ಗಸೂಚಿಗಳನ್ನು ಪರಿಷ್ಕರಿಸಿದ ನಂತರವೇ ಹೊಸ ಪ್ರಸ್ತಾವನೆಗಳನ್ನು ರಾಜ್ಯ ಸರ್ಕಾರಗಳು ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯಕ್ಕೆ ಸಲ್ಲಿಸುವುದೆಂದು ಕಡ್ಡಾಯವಾಗಿ ಸೂಚಿಲಾಗಿದೆ.</li>
<li>ಕೇಂದ್ರ ಸರ್ಕಾರದಿಂದ ಹೊಸ ಮಾರ್ಗಸೂಚಿಗಳು ಅನುಮೋದನೆಗೊಂಡ ನಂತರ ರಾಜ್ಯ ಸರ್ಕಾರದಿಂದ ಹೊಸ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು.</li>
<li>ಕೇಂದ್ರ ಪುರಸ್ಕೃತ ಪ್ರಸಾದ್ ಯೋಜನೆಯಡಿಯಲ್ಲಿ ಚಾಮುಂಡೇಶ್ವರಿ ದೇವಿ ಸನ್ನಿಧಾನವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ರೂ.109.74 ಕೋಟಿಗಳ ಪ್ರಸ್ತಾವನೆ ಸಲ್ಲಿಸಿದ್ದು, ಕೇಂದ್ರ ಸರ್ಕಾರದಿಂದ ಪರಿಕಲ್ಪನಾ ವರದಿಗೆ ಅನುಮೋದನೆ ದೊರೆತಿದ್ದು, ವಿವರವಾದ ಯೋಜನಾ ವರದಿ ಸಿದ್ಧಪಡಿಸಲು ಟೆಂಡರ್ ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.</li>
</ul>
</td>
</tr>
</table>

ಸಂಖ್ಯೆ: ಟಿಓಆರ್ 182 ಟಿಡಿವಿ 2022

(ಆನಂದ್ ಸಿಂಗ್)
ಪ್ರವಾಸೋದ್ಯಮ, ಜೀವಿಶಾಸ್ತ್ರ, ಮತ್ತು
ಪರಿಸರ ಸಚಿವರು

## ಅನುಬಂಧ-01

### 1. ಸ್ವದೇಶಿ ದರ್ಶನ ಯೋಜನೆಯ ಮುಖ್ಯ ಉದ್ದೇಶಗಳು :

- ಇದೊಂದು ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ ಕೇಂದ್ರ ಪುರಸ್ಕೃತ ಥೀಮ್ ಧಾರಿತ ಯೋಜನೆಯಾಗಿದೆ.
- ಆರ್ಥಿಕ ಬೆಳವಣಿಗೆ ಮತ್ತು ಉದ್ಯೋಗ ಸೃಷ್ಟಿಯ ಪ್ರಮುಖ ಉತ್ತೇಜಕವಾಗಿ ಪ್ರವಾಸೋದ್ಯಮವನ್ನು ಬೆಳೆಸುವುದು.
- ಯೋಜಿತ ಮತ್ತು ಆದ್ಯತೆಯ ರೀತಿಯಲ್ಲಿ ಪ್ರವಾಸಿ ಸಾಮರ್ಥ್ಯವನ್ನು ಹೊಂದಿರುವ ಸರ್ಕ್ಯೂಟ್‌ಗಳನ್ನು ಅಭಿವೃದ್ಧಿಪಡಿಸುವುದು.
- ದೇಶದಲ್ಲಿ ಜೀವನೋಪಾಯವನ್ನು ಸೃಷ್ಟಿಸಲು ದೇಶದ ಸಾಂಸ್ಕೃತಿಕ ಮತ್ತು ಪರಂಪರೆಯ ಮೌಲ್ಯವನ್ನು ಉತ್ತೇಜಿಸುವುದು ಹಾಗೂ ಪ್ರಸರಣಗೊಳಿಸುವುದು.
- ಅಭಿವೃದ್ಧಿಶೀಲ ಪ್ರಪಂಚದಿಂದ ಸುಸ್ಥಿರ ರೀತಿಯಲ್ಲಿ ಪ್ರವಾಸಿ ಆಕರ್ಷಣೆಯನ್ನು ಹೆಚ್ಚಿಸುವುದು ಸರ್ಕ್ಯೂಟ್/ಗಮ್ಯಸ್ಥಾನಗಳಲ್ಲಿ ವರ್ಗ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದು.
- ಸಮುದಾಯ ಆಧಾರಿತ ಅಭಿವೃದ್ಧಿ ಮತ್ತು ಬಡವರ ಪರವಾದ ಪ್ರವಾಸೋದ್ಯಮ ವಿಧಾನವನ್ನು ಅನುಸರಿಸುವುದು.
- ಸ್ಥಳೀಯರಲ್ಲಿ ಜಾಗೃತಿ ಮೂಡಿಸುವುದು

### 2. ಪ್ರಸಾದ್ ಯೋಜನೆಯ ಮುಖ್ಯ ಉದ್ದೇಶಗಳು:-

- ಇದೊಂದು ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಹಾಲಿ ಇರುವ ಪ್ರಮುಖ ಯಾತ್ರಾ ಸ್ಥಳಗಳನ್ನು ಉನ್ನತೀಕರಿಸುವ ಹಾಗೂ ಹೆಚ್ಚು ಸೌಕರ್ಯಗಳನ್ನು ಒದಗಿಸಲು ರೂಪಿಸುವ ಯೋಜನೆಯಾಗಿದೆ.
- ಧಾರ್ಮಿಕ ಯಾತ್ರ ಸ್ಥಳಗಳ ಪ್ರವಾಸವನ್ನು ಯೋಜನಾ ಬದ್ಧವಾಗಿ ಸಂಯೋಜಿಸಿ ಸುಸ್ಥಿರವಾಗಿ ಅಭಿವೃದ್ಧಿಗೊಳಿಸುವುದು.
- ಧಾರ್ಮಿಕ ಯಾತ್ರ ಪ್ರವಾಸೋದ್ಯವನ್ನು ನೇರವಾಗಿ ಹಾಗೂ ವಿವಿಧ ಉದ್ದೇಶಗಳ ಪರಿಣಾಮದಿಂದ ಉದ್ಯೋಗ ಸೃಷ್ಟಿಸುವುದು.
- ಧಾರ್ಮಿಕ ಯಾತ್ರ ಸ್ಥಳಗಳ ಅಭಿವೃದ್ಧಿಯನ್ನು ಎಲ್ಲಾ ವರ್ಗಗಳಿಗೂ ಹಾಗೂ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸುವುದು.
- ಪ್ರವಾಸಿಗರನ್ನು ಆಕರ್ಷಿಸಲು ಅತ್ಯುನ್ನತ ವಿಶ್ವದರ್ಜೆಯ ವಿವಿಧ ಮೂಲ ಸೌಲಭ್ಯಗಳನ್ನು ನಿರ್ಮಿಸಿ ಸುಸ್ಥಿರ ಅಭಿವೃದ್ಧಿಪಡಿಸುವುದು.
- ಸ್ಥಳೀಯ ಸಮೂಹಗಳಿಗೆ ಪ್ರವಾಸೋದ್ಯಮದ ಬಗ್ಗೆ ಅರಿವುಮೂಡಿಸುವುದು ಹಾಗೂ ಅದರಿಂದ ಅವರಿಗೆ ಆದಾಯ ಮೂಲಗಳನ್ನು ಗಳಿಸುವುದು ಮತ್ತು ಇದರಿಂದ ಅವರ ಜೀವನಮಟ್ಟವನ್ನು ಸುಧಾರಿಸುವುದು ಇದರಿಂದಾಗಿ ಸ್ಥಳೀಯ ಪ್ರದೇಶಗಳನ್ನು ಅಭಿವೃದ್ಧಿಗೊಳಿಸುವುದು.
- ಪ್ರಮುಖ ಪ್ರವಾಸಿ ಸ್ಥಳಗಳನ್ನು ಸ್ಥಳೀಯ ಕಲೆ, ಸಂಸ್ಕೃತಿಗೆ ಕರಕುಶಲ ವಸ್ತುಗಳು ಹಾಗೂ ಆಹಾರ ಮತ್ತು ಜೀವನಾಧಾರಗಳನ್ನು ಗುರುತಿಸಿ ಪ್ರಚಾರ ಪಡಿಸುವುದು.

3. **ಪರ್ವತಮಾಲಾ ಯೋಜನೆಯ ಉದ್ದೇಶಗಳು:**

- ಇದೊಂದು ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಗುಡ್ಡಗಾಡು ಪ್ರದೇಶದಲ್ಲಿ ಸಂಪರ್ಕವನ್ನು ಸಾಧಿಸುವ ಯೋಜನೆಯಾಗಿದೆ.
- ಕಷ್ಟಕರವಾದ ಗುಡ್ಡಗಾಡು ಪ್ರದೇಶಗಳಲ್ಲಿನ ಸಾಂಪ್ರದಾಯಿಕ ರಸ್ತೆಗಳ ಬದಲಿಗೆ ಇದು ಪರ್ಯಾಯ ಪರಿಸರ ಮಾರ್ಗವಾಗಿದೆ.
- ಪ್ರವಾಸೋದ್ಯಮವನ್ನು ಉತ್ತೇಜಿಸುವುದರ ಜೊತೆಗೆ ಪ್ರಯಾಣಿಕರಿಗೆ ಸಂಪರ್ಕ ಮತ್ತು ಅನುಕೂಲತೆಯನ್ನು ಸುಧಾರಿಸುವುದು ಇದರ ಉದ್ದೇಶವಾಗಿದೆ.
- ಇದು ದಟ್ಟಣೆಯ ನಗರ ಪ್ರದೇಶಗಳನ್ನು ಸಹ ಒಳಗೊಳ್ಳಬಹುದು, ಅಲ್ಲಿ ಸಾಂಪ್ರದಾಯಿಕ ಸಮೂಹ ಸಾರಿಗೆ ವ್ಯವಸ್ಥೆಗಳು ಕಾರ್ಯಸಾಧ್ಯವಲ್ಲ.